ಕರೆಬಂತು. ಅವರಿಗೆ ನನ್ನ ಬೇರೆ ಫೋಟೊಗಳು ಇಷ್ಟವಾಗಿದ್ದವು. ಕರೆದು ಮತ್ತೊಂದು ಆಡಿಷನ್ ತೆಗೆದುಕೊಂಡರು. ಆಗ ಅಲ್ಲಿ ಯಾರೂ ಇರಲಿಲ್ಲ. ಹಾಗಾಗಿ ಧೈರ್ಯವಾಗಿ ಆಡಿಷನ್ ಕೊಟ್ಟೆ. ಸಿನಿಮಾಗೆ ಆಯ್ಕೆಯಾದೆ'' ಎಂದು ತಮ್ಮ ಮೊದಲ ಸಿನಿಮಾದ ಅನುಭವವನ್ನು ಹಂಚಿಕೊಳ್ಳುತ್ತಾರೆ.

ತಮ್ಮ ಹೆಸರಿನ ಸಿನಿಮಾದ ಮೂಲಕವೇ ನಟನಾಜಗತ್ತಿಗೆ ಎಂಟ್ರಿ ಕೊಟ್ಟ ಅಪೂರ್ವ ನಂತರ 'ವಿಕ್ಟರಿ 2', 'ಕೃಷ್ಣ ಟಾಕೀಸ್' ಸೇರಿದಂತೆ ಇನ್ನೂ ಕೆಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಕೃಷ್ಣ ಟಾಕೀಸ್' ಮಾರ್ಚ್ 9ಕ್ಕೆ ಬಿಡುಗಡೆಯಾಗುತ್ತಿದೆ. ಕಣ್ಣು ಕದಲಿಸದ ಹಾಗೆ ನೋಡಿಸಿಕೊಂಡು ಹೋಗುವ ಶಕ್ತಿಯಿರುವ ಈ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾದಲ್ಲಿ ಒಂದು ಮುದ್ದಾದ ಪ್ರೇಮಕಥೆಯೂ ಇದೆಯಂತೆ.

ವಿಕ್ಕಿ ವರುಣ್ ನಟಿಸುತ್ತಿರುವ 'ಕಾಲಾ ಪತ್ಥರ್' ಸಿನಿಮಾಗೂ ಅವರು ನಾಯಕಿಯಾಗಿ ಆಯ್ಕೆಯಾಗಿದ್ದಾರೆ. 'ಇದೊಂದು ಭಿನ್ನ ಕಥೆ. ಇಂದಿಗೂ ಶಿಕ್ಷಣ ಇಲ್ಲದ ಹಲವು ಹಳ್ಳಿಗಳು ನಮ್ಮ ಸಮಾಜದಲ್ಲಿವೆ. ಸುಶಿಕ್ಷಿತ ಹುಡುಗಿಯೊಬ್ಬಳು ಅಂಥ ಹಳ್ಳಿಗೆ ಹೋಗಿ ಏನೆಲ್ಲ ಬದಲಾವಣೆ ಮಾಡುತ್ತಾಳೆ ಎಂಬುದು ಈ ಸಿನಿಮಾದಲ್ಲಿದೆ. ಪ್ರೌಢ ಸ್ವಾಭಿಮಾನಿ ಹುಡುಗಿಯ ಪಾತ್ರದಲ್ಲಿ ನಟಿಸುತ್ತಿದ್ದೇನೆ' ಎಂದು ತಮ್ಮ ಪಾತ್ರದ ಕುರಿತು ಹೇಳುತ್ತಾರೆ.

ಹಾಗೆಯೇ ದೊಡ್ಡ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ, ದೊಡ್ಡ ನಿರ್ದೇಶಕರ ಸಿನಿಮಾವೊಂದರಲ್ಲಿಯೂ ಅಪೂರ್ವ ನಟಿಸಿದ್ದಾರೆ. ಈಗಾಗಲೇ ಚಿತ್ರೀಕರಣವೂ ಮುಗಿದುಹೋಗಿರುವ ಆ ಸಿನಿಮಾದ ಹೆಸರು ಮತ್ತು ಯಾವುದೇ ವಿವರಗಳನ್ನು ಅವರು ಬಿಟ್ಟುಕೊಡುವುದಿಲ್ಲ. 'ಸದ್ಯದಲ್ಲಿಯೇ ಚಿತ್ರತಂಡವೇ ಘೋಷಣೆ ಮಾಡುತ್ತದೆ' ಎನ್ನುತ್ತಾರೆ.

ಇಂಥದ್ದೇ ಪಾತ್ರಗಳಲ್ಲಿ ನಟಿಸಬೇಕು ಎಂಬ ಚೌಕಟ್ಟೇನೂ ಹಾಕಿಕೊಂಡಿರದ ಅಪೂರ್ವ ಅವರಿಗೆ ಆದಷ್ಟೂ ಭಿನ್ನ ಮತ್ತು ಒಳ್ಳೆಯ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಹಂಬಲ ಇದೆ. 'ಈ ಜಗತ್ತಿನ ಬಗ್ಗೆ ಏನೂ ಗೊತ್ತಿಲ್ಲದ ನನಗೆ ಇಲ್ಲಿಗೆ ಬಂದ ಮೇಲೆ ಸಿನಿಮಾ ಮೇಲೆ ತುಂಬಾ ಪ್ರೀತಿ ಹುಟ್ಟಿದೆ. ಈ ಪ್ರೀತಿಯನ್ನು ಎಂದಿಗೂ ಕಳೆದುಕೊಳ್ಳಲು ಇಷ್ಟಪಡುವುದಿಲ್ಲ' ಎನ್ನುವ ಅಪೂರ್ವ, ಸಿನಿಮಾ ಜಗತ್ತಿನಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಳ್ಳುವ ನಿಶ್ಚಯದಲ್ಲಿದ್ದಾರೆ. ■




ಮೈಕುಲುಕುತ್ತ ''ನಂಗೆ ನಮ್ ಹುಡುಗ್ರು ಅಲ್ಲಿಗೆ ಹೋಗಿದ್ದೂ ಗೊತ್ತಿಲ್ಲ. ಏನ್ ಮಾಡಿದ್ರೂ ಅನ್ನೋದೂ ಗೊತ್ತಿಲ್ಲ. 'ಅತಿರಸ ಅಮಾಯಕ'ರು ನಮ್ಮ ಚಿತ್ರರಂಗದ ಹಿರಿಯ ಕಲಾವಿದರು. ನಮ್ ಸೆಲೆಬ್ರಿಟಿ (ಅಭಿಮಾನಿಗಳು)ಗಳಿಂದ ಅವರಿಗೆ ಬೇಜಾರಾಗಿದ್ರೆ ನಾನ್ ಸಾರಿ ಕೇಳ್ತೀನಿ'' ಎಂದು ಎಲ್ಲವನ್ನೂ ಸುಖಾಂತ್ಯಗೊಳಿಸಿದರು.

ಆಗಿದ್ದಿಷ್ಟು: ಆದರೆ ನಮ್ಮ ಗಾಂಧಿನಗರ ಹರಟೆಕಟ್ಟೆ ಮಂದಿ ಹೊರಜಗತ್ತಿಗೆ ಕಂಡಷ್ಟನ್ನೇ ನಂಬಿಕೊಂಡು ಕೂಡುವವರು ಅಲ್ಲವೇ ಅಲ್ಲ. ಅಲ್ಲಿನ ಹರಟೆಯಲ್ಲಿ ಹೊರಜಗತ್ತಿಗಿಂದ ಒಳಜಗತ್ತಿನ ಬಗೆಗೇ ಹೆಚ್ಚು ಚರ್ಚೆಯಾಗುವುದು. ಅವರು ಈ ಇಡೀ ಪ್ರಕರಣದ ಒಳಜಗತ್ತಿನ ಬಗೆಗೆ ಚರ್ಚಿಸುವ ಬಗೆಯೇ ಬೇರೆ. ಹರಟೆಕಟ್ಟೆಯ ಒಬ್ಬರ ಪ್ರಕಾರ, 'ಮಾಸ್‌ಬಾಸ್ ಜಾಣತನದ ಆಟ. ತನ್ನ ಅಭಿಮಾನಿಗಳ ವಿರುದ್ಧ ಮಾತಾಡಿದ 'ಅಮಾಯಕ' ನಟ ಕ್ಷಮೆ ಕೇಳಿಸುವ ಹಾಗೆ ಮಾಡುವ ಆಟಕಟ್ಟಿದ್ದೂ ಅವರೇ. ನಂತರ ಕ್ಷಮೆ ಕೇಳಿ ತಾನು ದೊಡ್ಡ ಮನುಷ್ಯನಾಗಿದ್ದು ಇನ್ನೊಂದು ಆಟ. ಅಲ್ಲಿಗೆ ಒಂದೇ ಕಲ್ಲಿಗೆ ಎರಡು ಹಕ್ಕಿಗಳು ಉದುರಿಬಿದ್ದಿವೆ. ತನ್ನ ವಿಷಯಕ್ಕೆ ಬಂದರೆ ಸರಿಯಿರುವುದಿಲ್ಲ ಎಂಬ ಮೆಸೇಜನ್ನೂ ಕೊಟ್ಟಿದ್ದಾರೆ. ಜೊತೆಗೆ ಕ್ಷಮೆ ಕೇಳುವ ಮೂಲಕ ತಾನು ದೊಡ್ಡ ಮನುಷ್ಯನೂ ಆಗಿದ್ದಾರೆ'.

ಹರಟೆಕಟ್ಟೆಯ ಇನ್ನೊಬ್ಬರ ಪ್ರಕಾರ, 'ಇದು ಅಮಾಯಕ ನಟ ತನ್ನ ಕಾಲ ಮೇಲೆ ತಾನೇ ಎಳೆದುಕೊಂಡ ಚಪ್ಪಡಿಕಲ್ಲು. ಮೊದಲು ವೈರಲ್ ಆದ ಆಡಿಯೊ ಲೀಕ್ ಮಾಡಿದ್ದು ಬೇರೆ ಯಾರೂ ಅಲ್ಲ. ಸ್ವತಃ ಅಮಾಯಕ ನಟನೇ. ತಾನು ಹೇಗೆ ಮಾತಾಡಿದ್ದೇನೆ ನೋಡು ಎಂದು ತೋರಿಸಲು ಪತ್ರಕರ್ತ ಬಂಧುವೊಬ್ಬರಿಗೆ ಆಡಿಯೊ ಕಳಿಸಿದ್ದರು. ಅದೇ ಈಗ ಅವರಿಗೆ ತಿರುಗುಬಾಣವಾಗಿದೆ'.

ಅಂತೂ ವಿವಾದ ಕೊನೆಗೊಂಡಿದೆ. ಸುಖಾಂತ್ಯಗೊಂಡಿದೆ ಎಂದು ಹೇಳಬಹುದೇನೋ. ಆದರೆ ಈ ಎಲ್ಲ ಎರಚಾಟಗಳಿಂದ ಜನರ ಕಣ್ಣಲ್ಲಿ ಚಿತ್ರರಂಗದ ಮಂದಿಯ ಇಮೇಜ್ ಇನ್ನಷ್ಟು ಕೆಳಗೆ ಇಳಿದಿರುವುದಂತೂ ನಿಜ. ಹಾಗಾಗಿಯೇ ಹರಟೆಕಟ್ಟೆಯ ಹುಡುಗುಬುದ್ಧಿಯ ಹುಡುಗನೊಬ್ಬ ಹೀಗೆ ಗೊಣಗಿಕೊಂಡಿದ್ದು: 'ಇವ್ರ ಸಿನಿಮಾಗಿಂತ ಹೊರಗಡೆ ಸರ್ಕಸ್ಸುಗಳೇ ಹೆಚ್ಚು ಮಜ ಇರತ್ತಪ್ಪಾ... ಇಂಥವನ್ನೇ ಥಿಯೇಟರ್‌ನಲ್ಲಿ ರಿಲೀಸ್ ಮಾಡಿ ಟಿಕೆಟ್ ಇಟ್ರೆ ಜಾಸ್ತಿ ಜನ ನೋಡ್ತಿದ್ರೇನೋ'. ■